2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟ ಇವರ ನ್ಯಾಯಾಲಯದಲ್ಲಿ

ಸತ್ರ ಮೊಕದ್ದಮೆ ಸಂಖ್ಯೆಃ 48/2013

| | | | |
|---|---|---|---|
| ಹೆಸರು | ಃ | ದೊಡ್ಡಪ್ಪ ಕಂದಕೂರ | ಫ್ರಾಸಾ-01 |
| ತಂದೆಯ ಹೆಸರು | ಃ | ಯಂಕಪ್ಪ | ಚಾಸಾ-01 |
| ವಯಸ್ಸು | ಃ | 58 ವರ್ಷ | |
| ಉದ್ಯೋಗ | ಃ | ಒಕ್ಕಲುತನ | |
| ವಾಸಸ್ಥಳ | ಃ | ಗೋನಾಳ ಎಸ್.ಟಿ., ತಾಃ ಹುನಗುಂದ | |

ದಿನಾಂಕಃ 06-08-2019 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

## ಸಾಕ್ಷಿಯ ವಿಚಾರಣೆಃ ಕಲಂ 299 ಸಿ.ಆರ್.ಪಿ.ಸಿ., ಅಡಿಯಲ್ಲಿ

### ಮುಖ್ಯ ವಿಚಾರಣೆಃ ಸಾರ್ವಜನಿಕ ಅಭಿಯೋಜಕರಿಂದಃ

2011 ನೇ ಇಸ್ವಿಯಲ್ಲಿ ನಾನು ನನ್ನ ಕುಟುಂಬದೊಂದಿಗೆ ತೋಟದ ಮನೆಯಲ್ಲಿ ವಾಸವಾಗಿದ್ದೆನು. ಮನೆಯಲ್ಲಿ ನಾನು, ಚಾಸಾ-7 ಅಕ್ಕಮ್ಮ, ಚಾಸಾ-8 ಮತ್ತು 9 ನನ್ನ ಮಕ್ಕಳು ವಾಸವಾಗಿರುತ್ತೇವೆ. ದಿನಾಂಕಃ 27-10-2011 ರಂದು ದೀಪಾವಳಿಯ ಪಾಡ್ಯದಂದು ರಾತ್ರಿ 10-00 ಗಂಟೆ ಸುಮಾರಿಗೆ ನಾಲ್ಕು ಮಂದಿ ಕಳ್ಳರು ತಮ್ಮ ಕೈಗಳಲ್ಲಿ ಬಡಿಗೆ ಮತ್ತು ಚಾಕು ಹಿಡಿದುಕೊಂಡು ನಮ್ಮ ಮನೆಗೆ ಬಂದು ನನ್ನನ್ನು ಹಣ ಕೊಡುವಂತೆ ಏರು ಶಬ್ದದಲ್ಲಿ ಹೆದರಿಸಿ ನನ್ನ ಕಾಲುಗಳಿಗೆ ಬಡಿಗೆಗೆಳಿಂದ ಹೊಡೆದರು. ನಂತರ ಮನೆಯೆಲ್ಲಾ ಹುಡುಕಾಡಿ ಮನೆಯ ಟ್ರಂಕಿನಲ್ಲಿ ಇಟ್ಟ ರೂ.5,000/- ನಗದು ಮತ್ತು ಇಪ್ಪತ್ತು ತೊಲೆ ಬೆಳ್ಳಿಯ ಆಭರಣ ಹಾಗೂ ನನ್ನ ಹೆಂಡತಿಯ ಕಿವಿಯಲ್ಲಿದ್ದ ಬಂಗಾರದ ಬೆಂಡೋಲೆ ಕಿವಿಯಿಂದ ಕಿತ್ತುಕೊಂಡು ಕಿವಿಗೆ ಗಾಯಪಡಿಸಿದ್ದು, ಕೊರಳಲ್ಲಿದ್ದ ಬಂಗಾರದ ಮಾಂಗಲ್ಯ ಸರ, ಬೋರ್ಮಳ ಕಿತ್ತುಕೊಂಡಿರುತ್ತಾರೆ. ನಂತರ ನನ್ನ ಮಗಳು ಸಂಗೀತಾ ಇವಳ ಕೊರಳಲ್ಲಿದ್ದ ಬಂಗಾರದ ಚೈನು ಮತ್ತು ಅವಳ ಕಿವಿಯಲ್ಲಿದ್ದ ಬಂಗಾರದ ಡ್ರಾಪ್ಸ್ ಮತ್ತು ಬಂಗಾರದ ಗುಂಡುಗಳು ಇವುಗಳನ್ನು ಸುಲಿಗೆ ಮಾಡಿಕೊಂಡು ಹೋಗಿರುತ್ತಾರೆ. ಎರಡು ನೋಕಿಯಾ ಕಂಪನಿಯ ಮೊಬೈಲ್‌ಗಳನ್ನು ಸಹ ಸದರಿ ನಾಲ್ಕು ಜನ ತೆಗೆದುಕೊಂಡು ಹೋಗಿರುತ್ತಾರೆ. ನಮ್ಮ ಮನೆಯ ಒಳಗೆ ಮತ್ತು ಹೊರಗೆ ವಿದ್ಯುದ್ದೀಪಗಳು ಇದ್ದವು. ಕಳ್ಳರನ್ನು ನಾವು ಸದರಿ ಬೆಳಕಿನಲ್ಲಿ ನೋಡಿರುತ್ತೇವೆ. ಸದರಿ ಕಳ್ಳರು ನಮ್ಮ ಮನೆಯಿಂದ ಸುಮಾರು ಎರಡು ಲಕ್ಷ

ರೂಪಾಯಿ ಬೆಲೆ ಬಾಳುವಷ್ಟು ವಸ್ತುಗಳನ್ನು ದೋಚಿಕೊಂಡು ಹೋಗಿರುತ್ತಾರೆ. ಇದಾದ ನಂತರ ನಾವು ಸರಕಾರಿ ದವಾಖಾನೆಗೆ ಹೋಗಿ ಚಿಕಿತ್ಸೆ ಪಡೆಯುತ್ತಿದ್ದಾಗ ಪೋಲಿಸರು ಆಸ್ಪತ್ರೆಗೆ ಬಂದು ನನ್ನ ಹೇಳಿಕೆ ದೂರನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿಯು ಈಗ ಸದರಿ ದೂರು ಮತ್ತು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಶಾನೆ ಪಿ-1 ಮತ್ತು ಸಹಿಯನ್ನು ನಿಶಾನೆ ಪಿ-1(ಎ) ಅಂತಾ ಗುರುತಿಸಲಾಯಿತು.

ಘಟನೆಯಾದ 4-5 ತಿಂಗಳ ನಂತರ ಸಿ.ಪಿ.ಐ., ರವರು ದರೋಡೆ ಮಾಡಿದ ಕಳ್ಳರು ಸಿಕ್ಕಿರುತ್ತಾರೆ, ಅವರನ್ನು ಗುರುತಿಸಲು ಬರಬೇಕು ಅಂತಾ ಇಲಕಲ್ಲ ಪೊಲೀಸ್ ಠಾಣೆಗೆ ಕರೆಯಿಸಿದ್ದರು, ಅಲ್ಲಿಂದ ನನ್ನನ್ನು ಬಾಗಲಕೋಟ ಸೆಂಟ್ರಲ್ ಜೈಲಿಗೆ ತಹಶೀಲ್ದಾರ ಇವರ ಜೀಪ್‌ನಲ್ಲಿ ಕರೆದುಕೊಂಡು ಹೋಗಿರುತ್ತಾರೆ. ಜೈಲಿನಲ್ಲಿ ಒಂದು ದೊಡ್ಡ ಕೋಣೆಯಲ್ಲಿ 25 ಜನರನ್ನು ನಿಲ್ಲಿಸಿದ್ದರು, ಅವರ ಪೈಕಿ ನಾನು ನಮ್ಮ ಮೇಲೆ ದರೋಡೆ ಮಾಡಿದ ಇಬ್ಬರು ವಕ್ತಿಗಳನ್ನು ಗುರುತು ಹಿಡಿದೆನು. ನಂತರ ಮತ್ತೊಂದು ಬಾರಿ ಸದರಿ ವ್ಯಕ್ತಿಗಳು ತಮ್ಮ ಬಟ್ಟೆಗಳನ್ನು ಬದಲಾಯಿಸಿಕೊಂಡು ಮತ್ತು ಕೆಲವರು ವ್ಯಕ್ತಿಗಳನ್ನು ಬದಲಾಯಿಸಿ ತೋರಿಸಿದಾಗ ಮತ್ತೆ ಇನ್ನಿಬ್ಬರು ವ್ಯಕ್ತಿಗಳನ್ನು ಗುರುತಿಸಿ, ಅವರೇ ನಮ್ಮ ಮನೆಯಲ್ಲಿ ದರೋಡೆ ಮಾಡಿದ ವ್ಯಕ್ತಿಗಳು ಅಂತಾ ಅಧಿಕಾರಿಗಳಿಗೆ ಹೇಳಿರುತ್ತೇನೆ. ಸದರಿ ನಾಲ್ಕು ಜನ ವ್ಯಕ್ತಿಗಳನ್ನು ನಾನು ನೋಡಿದರೆ ಈಗಲೂ ಸಹ ಗುರುತಿಸುತ್ತೇನೆ. ಈ ಬಗ್ಗೆ ನಾನು ಹೇಳಿಕೆ ಕೊಟ್ಟಿರುತ್ತೇನೆ. ಕಳ್ಳರು ನನ್ನನ್ನು ಹೊಡೆದ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗ ನ್ಯಾಯಾಲಯದ ಮುಂದಿರುವ ದೊಣ್ಣೆಯನ್ನು ನೋಡಿ ಗುರುತಿಸಿದ್ದು, ಅದನ್ನು ಮುದ್ದೆಮಾಲು-1 ಅಂತಾ ಗುರುತಿಸಲಾಯಿತು. ಕಳ್ಳರು ನನ್ನ ಬಲ ಮೊಣಕಾಲಿಗೆ ಹೊಡೆದು ಗಾಯಪಡಿಸಿದ್ದು, ನನ್ನ ಹೆಂಡತಿಯ ಕಿವಿಯಲ್ಲಿನ ಓಲೆ ಕಿತ್ತುಕೊಂಡಿದ್ದರಿಂದ ಅವಳ ಕಿವಿಗೆ ಗಾಯ ಆಗಿರುತ್ತದೆ. ಮತ್ತೆ ಯಾರಿಗೂ ಗಾಯ ಆಗಿರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

Sd/-

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಬಾಗಲಕೋಟ.